# ಅಮೆರಿಕ -ಇಸ್ರೇಲ್-ಇರಾನ್ ಯುದ್ಧ

INSTAKAS

## ಇದೀಗ ಸುದ್ದಿಯಲ್ಲಿದೆ:

- ಅಮೆರಿಕದ 'ಆಪರೇಷನ್ ಎಪಿಕ್ ಫ್ಯೂರಿ' ಮತ್ತು ಇಸ್ರೇಲ್‌ನ 'ಆಪರೇಷನ್ ರೋರಿಂಗ್ ಲಯನ್' ಕಾರ್ಯಾಚರಣೆಗಳ ಬೆನ್ನಲ್ಲೇ, ಇರಾನ್‌ನ ಪರಮೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಅವರ ಮರಣವು ದೃಢಪಟ್ಟಿದೆ. ಈ ಘಟನೆಯು ಆ ಭಾಗದ ಭೂ-ರಾಜಕೀಯ ಚಿತ್ರಣವನ್ನು ಮೂಲಭೂತವಾಗಿ
- [illegible].'ಆಪರೇಷನ್ ಟ್ರೂ ಪ್ರಾಮಿಸ್ 4' ರ ಮೂಲಕ ಇಸ್ರೇಲ್ ಮತ್ತು ನೆರೆಯ ಗಲ್ಫ್ ರಾಷ್ಟ್ರಗಳ ಮೇಲೆ ಕ್ಷಿಪಣಿ ದಾಳಿಗಳನ್ನು ನಡೆಸುವ ಮೂಲಕ ಪ್ರತಿಕಾರವನ್ನು ತೀರಿಸಿಕೊಂಡಿದೆ.





- ಬಹ್ರೇನ್, ಕತಾರ್, ಯುಎಇ (UAE), ಕುವೈತ್ ಮತ್ತು ಜೋರ್ಡಾನ್‌ನಲ್ಲಿರುವ ಅಮೇರಿಕಾ ಸೇನಾ ನೆಲೆಗಳ ಮೇಲೆ ಇರಾನ್ ಕ್ಷಿಪಣಿ ಹಾಗೂ ಡ್ರೋನ್ ದಾಳಿಗಳನ್ನು ಮಾಡಿದೆ.





- ತೈಲ ಸಾಗಣೆಯ ನೌಕೆಗಳ ಮೇಲೆ ದಾಳಿ ಹಾಗೂ ಬೆದರಿಕೆ ಹಾಕುವ ಮೂಲಕ ಇರಾನ್ ಹೋರ್ಮುಜ್ ಜಲಸಂಧಿಯನ್ನು ಪರಿಣಾಮಕಾರಿಯಾಗಿ ಸ್ಥಗಿತಗೊಳಿಸಿದೆ. ಇದರಿಂದಾಗಿ ಹಡಗು ಸಂಚಾರ ಶೇ. 70ರಷ್ಟು ಕುಸಿದಿದ್ದು, ಜಾಗತಿಕ ತೈಲ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗುವ ಭೀತಿ ಎದುರಾಗಿದೆ.



## ಪ್ರಸ್ತುತ ಉದ್ವಿಗ್ನತೆಯ ಐತಿಹಾಸಿಕ ಹಿನ್ನೆಲೆ:


### ದೀರ್ಘಕಾಲದ ಹಗೆತನ ಮತ್ತು ಸೈದ್ಧಾಂತಿಕ ಸಂಘರ್ಷ:-




1979ರ ಇಸ್ಲಾಮಿಕ್ ಕ್ರಾಂತಿಯ ನಂತರ, ಅಮೆರಿಕ ಮತ್ತು ಇರಾನ್ ನಡುವೆ 'ಶೀತಲ ಸಮರ'ದಂತಹ ವಾತಾವರಣ ನಿರ್ಮಾಣವಾಗಿದೆ. ಕಠಿಣ ಆರ್ಥಿಕ ನಿರ್ಬಂಧಗಳು ಮತ್ತು ಇರಾನ್ ಅನ್ನು 'ಭಯೋತ್ಪಾದನೆಯ ಪ್ರಾಯೋಜಕ ರಾಷ್ಟ್ರ' ಎಂದು ಹಣೆಪಟ್ಟಿ ಹಚ್ಚಿರುವುದು ಉಭಯ ದೇಶಗಳ ಸಂಬಂಧವನ್ನು ಮತ್ತಷ್ಟು ಬಿಗಡಾಯಿಸುವಂತೆ ಮಾಡಿದೆ.



### 2015ರ ಪರಮಾಣು ಒಪ್ಪಂದದ (JCPOA) ವೈಫಲ್ಯ:-



2015ರ ಪರಮಾಣು ಒಪ್ಪಂದದಿಂದ 2018ರಲ್ಲಿ ಅಮೆರಿಕ ಹಿಂದೆ ಸರಿದಿದ್ದು, ಇರಾನ್ ಮೇಲೆ 'ಹೆಚ್ಚಿನ ಒತ್ತಡ' ಹೇರುವ ಅಭಿಯಾನಕ್ಕೆ ನಾಂದಿ ಹಾಡಿತು.

ಇದಕ್ಕೆ ಪ್ರತಿಯಾಗಿ ಇರಾನ್ ಹಂತಹಂತವಾಗಿ ಯುರೇನಿಯಂ ಪುಷ್ಟೀಕರಣದ ಮಿತಿಗಳನ್ನು ಉಲ್ಲಂಘಿಸಿತು.

ಇದರಿಂದಾಗಿ ಇರಾನ್‌ನ ಪರಮಾಣು ಸನ್ನದ್ಧತೆಯು ಅಮೆರಿಕ ಮತ್ತು ಇಸ್ರೇಲ್‌ಗೆ ಅಸ್ತಿತ್ವದ ಭೀತಿಯಾಗಿ ಪರಿಣಮಿಸಿತು.

### 'ಗ್ರೇ ಝೋನ್' ಮತ್ತು ಛಾಯಾ ಯುದ್ಧ (ಪ್ರಾಕ್ಸಿ ವಾರ್):-

ಹಲವು ವರ್ಷಗಳಿಂದ ಈ ಸಂಘರ್ಷವು ತೆರೆಯ ಮರೆಯಲ್ಲಿ ಛಾಯಾ ಯುದ್ಧದಂತೆ ನಡೆಯುತ್ತಿದೆ. ಇರಾನ್ ತನ್ನ 'ಆಕ್ಸಿಸ್ ಆಫ್ ರೆಸಿಸ್ಟೆನ್ಸ್' (ಹಮಾಸ್, ಹೆಜ್ಬೊಲ್ಲಾ ಮತ್ತು ಹೌತಿ ಬಂಡುಕೋರರು) ಸಂಘಟನೆಗಳ ಮೂಲಕ ಲೆಬನಾನ್, ಸಿರಿಯಾ, ಇರಾಕ್ ಮತ್ತು ಯೆಮೆನ್‌ಗಳಲ್ಲಿ ತನ್ನ ಪ್ರಭಾವವನ್ನು ವಿಸ್ತರಿಸಿದೆ.



## ಜಾಗತಿಕ ಪರಿಣಾಮಗಳು:

- **ಇಂಧನ ಆಘಾತ ಮತ್ತು ಹಣದುಬ್ಬರ:-** ಜಾಗತಿಕ ಮಾರುಕಟ್ಟೆಯಲ್ಲಿ ತೈಲ ಬೆಲೆಗಳು ನಿಯಂತ್ರಣ ಮೀರಿ ಏರಿಕೆಯಾಗುವ ಸಾಧ್ಯತೆಯಿದೆ. ಇದರಿಂದಾಗಿ ಸಾರಿಗೆ ವೆಚ್ಚ ಮತ್ತು ವಿಮಾ ಕಂತುಗಳ ದರಗಳಲ್ಲಿ ಭಾರಿ ಏರಿಕೆಯಾಗಲಿದೆ.




**ಜಾಗತಿಕ ಪೂರೈಕೆ ಸರಪಳಿಯ ವ್ಯತ್ಯಯ:-** ಯುದ್ಧದ ಸನ್ನಿವೇಶವು ತೈಲ, ಎಲ್‌ಎನ್‌ಜಿ (LNG), ರಸಗೊಬ್ಬರ ಮತ್ತು ತೈಲ-ರಾಸಾಯನಿಕಗಳ ಪೂರೈಕೆಯ ಮೇಲೆ ತೀವ್ರವಾದ ಕೆಟ್ಟ ಪರಿಣಾಮ ಬೀರಲಿದೆ. ಹಡಗುಗಳು ಸುರಕ್ಷಿತ ಸಂಚಾರಕ್ಕಾಗಿ ದೀರ್ಘ ಮಾರ್ಗಗಳನ್ನು ಅವಲಂಬಿಸಬೇಕಾಗಿರುವುದರಿಂದ ಸರಕು ಸಾಗಣೆ ವೆಚ್ಚ ಗಣನೀಯವಾಗಿ ಹೆಚ್ಚಾಗಲಿದೆ.






**ಚೀನಾ ಮತ್ತು ರಷ್ಯಾದ ಪಾತ್ರ:-** ಚೀನಾ, ಇರಾನ್‌ನಿಂದ ಅತ್ಯಂತ ಹೆಚ್ಚು ತೈಲವನ್ನು ಆಮದು ಮಾಡಿಕೊಳ್ಳುವ ದೇಶವಾಗಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಬೆಲೆ ಏರಿಕೆಯಾಗುವುದರಿಂದ ರಷ್ಯಾ ಹೆಚ್ಚಿನ ಆರ್ಥಿಕ ಲಾಭವನ್ನು ಗಳಿಸುವ ಸಾಧ್ಯತೆಯಿದೆ.

## ಭಾರತದ ಮೇಲಾಗುವ ಪರಿಣಾಮಗಳು:



**ಇಂಧನ ಹಣದುಬ್ಬರ:-** ಭಾರತವು ತನ್ನ ಒಟ್ಟು ಕಚ್ಚಾ ತೈಲದ ಅವಶ್ಯಕತೆಯಲ್ಲಿ ಶೇ. 85ರಷ್ಟನ್ನು ಆಮದು ಮಾಡಿಕೊಳ್ಳುತ್ತದೆ. ಯುದ್ಧದ ಹಿನ್ನೆಲೆಯಲ್ಲಿ ಹೆಚ್ಚುತ್ತಿರುವ ತೈಲ ಬೆಲೆಗಳು ಮತ್ತು ಹಡಗುಗಳ ಮೇಲಿನ ಸಮರ ಶುಲ್ಕವು ರೂಪಾಯಿ ಮೌಲ್ಯದ ಮೇಲೆ ತೀವ್ರ ಒತ್ತಡ ಹೇರುತ್ತಿವೆ.




- **ವ್ಯಾಪಾರ ವ್ಯತ್ಯಯ:-** ಕಡಲ ಮಾರ್ಗದ ಅಸುರಕ್ಷತೆಯಿಂದಾಗಿ ಕೃಷಿ ಉತ್ಪನ್ನಗಳ ರಫ್ತು ಮತ್ತು ಅಗತ್ಯ ರಸಗೊಬ್ಬರಗಳ ಆಮದಿಗೆ ತೀವ್ರ ಅಡೆತಡೆಗಳು ಉಂಟಾಗಿವೆ.




**ಪ್ರಜೆಗಳ ಸುರಕ್ಷತೆ:-** ಗಲ್ಫ್ ರಾಷ್ಟ್ರಗಳಲ್ಲಿ ಸುಮಾರು 8-9 ದಶಲಕ್ಷ ಭಾರತೀಯರು ವಾಸಿಸುತ್ತಿದ್ದಾರೆ. ಆ ಭಾಗದಲ್ಲಿ ವಾಣಿಜ್ಯ ವಿಮಾನ ಸಂಚಾರ ಸ್ಥಗಿತಗೊಳ್ಳುತ್ತಿರುವ ಹಿನ್ನೆಲೆಯಲ್ಲಿ, ಪ್ರಜೆಗಳನ್ನು ಸುರಕ್ಷಿತವಾಗಿ ಕರೆತರುವ ಕುರಿತು ಕೇಂದ್ರ ಸಚಿವ ಸಂಪುಟದ ಭದ್ರತಾ ಸಮಿತಿಯು (CCS) ಚರ್ಚೆ ನಡೆಸಿದೆ.




**ತಂತ್ರೋಪಾಯದ ಸಂಪರ್ಕಗಳು:-** ಮಧ್ಯ ಏಷ್ಯಾವನ್ನು ಸಂಪರ್ಕಿಸುವ ಚಾಬಹಾರ್ ಬಂದರು, I2U2 (ಭಾರತ-ಇಸ್ರೇಲ್-ಯು ಎ ಇ-ಅಮೇರಿಕ) ಒಕ್ಕೂಟ, IMEC (ಭಾರತ-ಮಧ್ಯಪ್ರಾಚ್ಯ-ಯುರೋಪ್ ಆರ್ಥಿಕ ಸಂಚಾರ ಮಾರ್ಗ) ಮತ್ತು “ಗಲ್ಫ್ ಪಾರ್ಟ್ನರ್ಷಿಪ್” (ಸೌದಿ ಅರೇಬಿಯಾ, ಯು ಎ ಇ)ಗಳ ಮೇಲೆ ಈ ಯುದ್ಧವು ಪ್ರತಿಕೂಲ ಪರಿಣಾಮ ಬೀರಿದ್ದು, ಈ ಯೋಜನೆಗಳ ಭವಿಷ್ಯದ ಮೇಲೆ ತೀವ್ರ ಅನಿಶ್ಚಿತತೆ ಮೂಡಿಸಿದೆ.

